ಗುಲ್ಬರ್ಗಾ ನಗರದಲ್ಲಿ ದೂರದರ್ಶನ ಕೇಂದ್ರ ಸ್ಥಾಪನೆ ಮಾಡುವುದು

೩೪೨) (೯೪೩) ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗಾ).—ಮಾನ್ಯ ಪ್ರಚಾರ, ವಾರ್ತಾ ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಗುಲ್ಬರ್ಗಾ ನಗರದಲ್ಲಿ ದೂರದರ್ಶನ ಸ್ಟುಡಿಯೋ ನಿರ್ಮಾಣಕ್ಕಾಗಿ ಹಣ ಮಂಜೂರಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಮಂಜೂರಾದ ಹಣವೆಷ್ಟು ?

ಇ) ಸದರಿ ಸ್ಟುಡಿಯೋವನ್ನು ಯಾವ ಸ್ಥಳದಲ್ಲಿ ಯಾವಾಗ ನಿರ್ಮಿಸಲಾಗುವುದು ?

ಶ್ರೀ ಎಂ. ರಘುಪತಿ (ಪ್ರಚಾರ, ವಾರ್ತಾ ಹಾಗೂ ಪ್ರವಾಸೋದ್ಯಮ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಜನತಾ ಗೃಹ ನಿರ್ಮಾಣ

೩೪೩ (೧೧೦೪) ಶ್ರೀ ಉಗ್ರನರಸಿಂಹಪ್ಪ (ಪಾವಗಡ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

ಅ) ಪಾವಗಡ ಮತ್ತು ವೈ.ಎನ್ ಹೊಸಕೋಟೆ ಪುರಸಭೆಗಳ ವ್ಯಾಪ್ತಿಯಲ್ಲಿ ಮಂಜೂರಾದ ಜನತಾ ವಸತಿ ಗೃಹಗಳ ಸಂಖ್ಯೆ ಎಷ್ಟು ?

ಆ) ೧೯೮೨-೮೩ ಮತ್ತು ೧೯೮೩-೮೪ನೇ ಸಾಲುಗಳಲ್ಲಿ ಸರ್ಕಾರದವರಿಂದ ಜನತಾ ಗೃಹಗಳಿಗೆ ಮಂಜೂರಾದ ಹಣವೆಷ್ಟು ?

ಇ) ಸದರಿ ಪುರಸಭೆಯವರು ಜನತಾಗೃಹ ನಿರ್ಮಾಣಕ್ಕೆ ಹಣವನ್ನು ಸಕಾಲಕ್ಕೆ ಒದಗಿಸಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಜನತಾ ಗೃಹ ನಿರ್ಮಾಣದ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮ ವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಹಾಗೂ ವಸತಿ ಸಚಿವರು).—

ಅ) ಜನತಾ ಗೃಹಗಳಲ್ಲಿ ಭಾಗ್ಯಮಂದಿರ ಮನೆಗಳು ಕೆಳಕಂಡಂತೆ ಮಂಜೂರಾಗಿವೆ.

	ವಸತಿ ನಿರ್ಮಾಣ	ರಿಪೇರಿಗೆ
ಪಾವಗಡದ ಪುರಸಭೆಗೆ	೧೦೪	೫೪
ವೈ.ಎನ್. ಹೊಸಕೋಟೆ ಪುರಸಭೆಗೆ	೧೦೪	೫೪

ಆ) ೧೯೮೨-೮೩ರಲ್ಲಿ

	ರೂ.	ರೂ.
ಪಾವಗಡ	೩೫,೯೧೦	೧೦,೨೦೦
ವೈ. ಎನ್. ಹೊಸಕೋಟೆ	೩೫,೯೧೦	೧೦,೨೦೦
೧೯೮೩-೮೪ರಲ್ಲಿ		
ಪಾವಗಡ	೭೨,೦೯೦	೨೦,೧೫೦
ವೈ. ಎನ್. ಹೊಸಕೋಟೆ	೭೨,೦೯೦	೨೦,೧೫೦

ಇ) ಇಲ್ಲ.

ಈ) ಮೇಲ್ಕಂಡ ಮನೆಗಳಿಗೆ ಕೊಡಬೇಕಾದ ಪೂರ್ತಾ ಹಣವನ್ನು ಸರ್ಕಾರ ಈಗಾಗಲೇ ಬಿಡುಗಡೆ ಮಾಡಿದೆ. ಈ ಹಣಕಾಸು ವರ್ಷದೊಳಗೆ ಮಂಜೂರಾದ ಎಲ್ಲಾ ಮನೆಗಳನ್ನು ಪೂರ್ಣಗೊಳಿಸಬೇಕೆಂದು ಆದೇಶ ನೀಡಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

೩೪೪ (೧೦೯೭) ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್ (ಕೊಪ್ಪಳ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ೧೯೭೯ ರಿಂದ ೧೯೮೩ರವರೆಗೆ ಉಂಟಾದ ಒಟ್ಟು ನಷ್ಟದ ಮೊತ್ತವೆಷ್ಟು ?

ಆ) ಈ ನಷ್ಟಕ್ಕೆ ಕಾರಣಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ೧೯೭೯–೮೦ ರಿಂದ ೧೯೮೨–೮೩ರವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಟ್ಟು ೫,೭೩೪.೫೯ ಲಕ್ಷ ರೂ.ಗಳ ನಷ್ಟವನ್ನು ಅನುಭವಿಸಿದೆ.

ಆ) ಈ ಕೆಳಕಂಡ ಕಾರಣಗಳು:—

೧) ನೌಕರರಿಗೆ ಪರಿಷ್ಕೃತ ವೇತನ, ತುಟ್ಟಿಭತ್ಯ ನೀಡಿಕೆ.

೨) ಟೈರುಗಳು, ಟ್ಯೂಬುಗಳ, ಬಿಡಿ ಭಾಗಗಳ ಏರಿಕೆ.

೩) ವಾಹನ ತೆರಿಗೆ ಮತ್ತು ಸರ್‌ಚಾರ್ಜನ ಏರಿಕೆ.

೪) ರೈತರ, ಕಾರ್ಮಿಕರ ಮತ್ತು ವಿದ್ಯಾರ್ಥಿಗಳ ಆಂದೋಳನ ಪರಿಣಾಮವಾಗಿ ಬಸ್ಸುಗಳಿಗೆ ಆದ ಜಕಂ.

೫) ಪ್ರಯಾಣಿಕರಿಗೆ ಪ್ರಯಾಣದರದಲ್ಲಿ ಕೊಟ್ಟ ರಿಯಾಯಿತಿಗಳು

ರಾಜ್ಯದ ಪ್ರವಾಸೋದ್ಯಮ ಇಲಾಖೆಯ ಅಧೀನದಲ್ಲಿರುವ ಹೋಟೆಲ್‌ಗಳು

(೧೦೪೦) ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).—ಮಾನ್ಯ ವಾರ್ತಾ, ಪ್ರಚಾರ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದ ಪ್ರವಾಸೋದ್ಯಮ ಇಲಾಖೆಯಿಂದ ನಡೆಯುವ ಹೊಟಲುಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು)

ಆ) ಸದರಿ ಹೋಟೇಲುಗಳು ಯಾರ ವಶೀಕರಣದಲ್ಲಿ ಸೇರುತ್ತವೆ ?

ಇ) ಇವುಗಳಿಂದ ಬರುವ ವಾರ್ಷಿಕ ಲಾಭ ಎಷ್ಟು ? (೧೯೮೦–೮೧, ೧೯೮೧–೮೨, ೧೯೮೨–೮೩ ಮತ್ತು ೧೯೮೩–೮೪ರ ವಿವರಗಳನ್ನೊದಗಿಸುವುದು)

ಶ್ರೀ ಎಂ. ರಘುಪತಿ (ವಾರ್ತಾ, ಪ್ರಚಾರ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ೧೨ ಹೋಟೇಲುಗಳು ಮತ್ತು ೨ ಉಪಹಾರ ಗೃಹಗಳು ನಡೆಯುತ್ತಿವೆ (ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ)

ಆ) ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಶೀಕರಣದಲ್ಲಿ ಸೇರುತ್ತವೆ.